Founded 1917 SATYAVADI Oldest Newspaper of Mysore Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 244] ಶುಕ್ರವಾರ 16—4—1943 [3 ಪೈ

ರೋಮೆಲ್ ಓಡಿಹೋದನೇ ?

ಟ್ಯುನಿಷಿಯಾದಿಂದ ರೋಮೆಲ್ ಇಟಲಿಗೆ ಇದ್ದಕ್ಕಿದ್ದ ಹಾಗೆ ವಿಮಾನದಲ್ಲಿ ಹೊರಟು ಹೋದನು. ಹೊಂಡಿವ ಮುನ್ನ ಜರ್ಮನಿ ಇಟಲಿಯ ಭೂ ನೀರು ವಾಯು ಮಂಡಲದ ಮುಖ್ಯ ಅಧಿಕಾರಿಗಳನ್ನು ನೋಡಿ ಮಾತನಾಡಿದನು. ಟ್ಯುನಿಷಿಯಾದಿಂದ ನಿನಲಿಗೂ ಅಲ್ಲಿಂದ ಜರ್ಮನಿ ಕಡೆ ಪ್ರಯಾಣ ಮಾಡಿದನಂತೆ.

ಇಟಲಿಯಲ್ಲಿ ವಿಮಾನ ದಳಕ್ಕೆ ಸೇರಿದ ಮೂರು ಬ್ರಿಟಿಷ್ ಯುದ್ಧ ಕೈದಿಗಳು ತಪ್ಪಿಸಿಕೊಂಡು ರೋಂನಲ್ಲಿರುವ ಪೋಪ್ ರಾಜ್ಯವನ್ನು ಸೇರಿರುವರು. ಇವರನ್ನು ದಸ್ತಗಿರಿ ಮಾಡುವ ಹಾಗಿಲ್ಲ. ಪೋಪರವರ ಪ್ರದೇಶವು ಇಟಾಲಿಯನರ ಆಡಳಿತಕ್ಕೆ ಸೇರಿಲ್ಲ ಈ ಮುಂಚೆ ಓಡಿ ಹೋಗಿದ್ದಾಗ ಇಟಲಿಯವರು ರೊಮೆಲ್ಲನ ಕಡೆಯವರೆಂದು ಸುಮ್ಮನಿದ್ದರಂತೆ.

ಆಸ್ಟ್ರೇಲಿಯಾವನ್ನು ಮುತ್ತಲು ಜಪಾನೀಯರು ನೌಸೈನ್ಯವನ್ನೂ, ವಿಮಾನವನ್ನೂ ಜಮಾಯಿಸುತ್ತಿರುವರೆಂದು ಜನರಲ್ ಬ್ಲೇಮೈಯವರು ಹೇಳುತ್ತಾರೆ.

ಮುಸಲೋನಿಯು ತನ್ನ ಮುಖ್ಯ ಪೋಲೀಸ್ ದಳಪತಿಯನ್ನು ಕೆಲಸದಿಂದ ವಜಾ ಮಾಡಿದನು ಕಾರಣ ತಿಳಿಸಿಲ್ಲ.

ಮಾರ್ಚಿ ತಿಂಗಳಲ್ಲಾದ ವಿಮಾನ ಧಾಳಿಯಿಂದ ಇಂಗ್ಲೆಂಡಿನಲ್ಲಿ 293 ಸತ್ತರು 439 ಜನ ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿರುವರು.

ಕಲ್ಕತ್ತಾ ವಿಶ್ವ ವಿದ್ಯಾನಿಲಯದನ್ನು ಚಟಿಕಾಂಗ್‌ನಲ್ಲಿ ಪರೀಕ್ಷೆಗಳನ್ನು ನಡೆಸಲು ಆಗುವುದಿಲ್ಲ. ಅಲ್ಲಿ ಕೂಡ ಬೇಕೆಂದಿದ್ದ ವಿದ್ಯಾರ್ಥಿಗಳು ಮತ್ತಾವ ಸೆಂಟರಿನಲ್ಲಾದರೂ ಕೂಡಬಹುದೆಂದು ಪ್ರಕಟಿಸಿರುವರು.

ಚೀನಾಕ್ಕೆ ಅಮೆರಿಕಾದಿಂದ 70 ಜನ ವಿದ್ಯಾರ್ಥಿಗಳನ್ನು ಕಳಿಸುವರು. ಇವರು ಅಲ್ಲಿ ವೈದ್ಯ, ಆರೋಗ್ಯ ಇವೇ ವಿಷಯಗಳನ್ನು ಕಲಿಯುವರು.

ಬಿಕನೀರು ಮಹಾರಾಜರು ವೈಸರಾಯರ ಯುದ್ಧ ನಿಧಿಗೆ 3 ಲಕ್ಷ ರೂಪಾಯಿಯನ್ನು ಕೊಟ್ಟರುವುದಲ್ಲದೆ ಡಿಫೆನ್ಸ್ ಸರ್ಟಿಫಿಕೇಟನ್ನು 10 ಲಕ್ಷ ರೂಪಾಯಿಗೆ ಕೊಂಡಿರುವರು.

ಆಸ್ಟ್ರೇಲಿಯಾ ಮಂತ್ರಿಯಾದ ಮಿ|| ಫೋರ್ಡ್‌ರವರು ಯುದ್ಧವು ಹಲವಾರು ವರ್ಷ ನಡೆಯುವುದೆಂದು ಹೇಳಿದರು.

ಕ್ಯಾಸ್ಪಿಯನ್ ಸಮುದ್ರದಲ್ಲಿ ಬಂದು ಜರ್ಮನ್ ಸಬ್ಮೆರೀನನ್ನು ಮುಳುಗಿಸಿದರು ಅಡರಲ್ಲಿದ್ದ ಕಲಸಗಾರರನ್ನೆಲ್ಲಾ ಸೆರೆ ಹಿಡಿದರು.

ಟ್ಯುನಿಷಿಯಾದಲ್ಲಿ ಜರ್ಮನ್ ಹುರಿ ಟ್ಯಾಂಕುಗಳನ್ನು ಆಂಗ್ಲೇಯರು ಹಿಡಿದು ಕೊಂಡರಷ್ಟೆ ಅದರ ನಿರ್ಮಾಣವನ್ನು ಪರೀಕ್ಷಿಸುತ್ತಿರುವರು.

ಜನರಲ್ ಡಿಗಾಲ್ ಜೊತೆಯಲ್ಲಿ ಮಾತುಕತೆ ನಡೆಸಿ ಜನರಲ್ ಕಟ್ರೋರವರು ಲಿಬ್ಯೇರಿಯಾಕ್ಕೆ ಹಿಂತಿರುಗಿದರು.

ವರ್ತಮಾನ

ಮೊಡಂಚಾಕಾಯಿಸಿಕರವರಿಗೆ ರಾಯಲ್ ಕಾಲೇಜ್ ಸರ್ಜ್ ಎಂಬ ಪ್ರಶಸ್ತಿಯನ್ನು ಕೊಡುವುದರಿಂದ ಇವರು ಅಮೆರಿಕಾದಿಂದ ಇಂಗ್ಲೆಂಡಿಗೆ ಒರಬೇಕೆಂದು ಕೋರಲಾಗಿದೆ. ಹಿಂದೆ ಈ ಪ್ರಶಸ್ತಿಯು ರಾಯಲ್ ಫಿಸಿಸ್ಸಿರವರಿಗೆ ಮಾತ್ರ ಸ್ತ್ರೀಯರಲ್ಲಿ ಕೊಡಲ್ಪಟ್ಟಿತ್ತು. ಇದು ಎರಡನೇದು.

ಮೂರತ್ ಕೋಟಿಯನ್ನು ಹಿಡಿದಾಗಿನಿಂದ ಈ ವರೆವಿಗೆ ಮಿತ್ರ ಪಕ್ಷದವರು 30 ಸಾವಿರ ಆಕ್ಸಿಸ್ ಶತ್ರುಗಳನ್ನು ಹಿಡಿದರುವರು.

ಮುಂದಿನ ವಾರ ಹಿಟ್ಲರ್ ಜರ್ಮನಿ ಪಾರ್ಲಿಮೆಂಟ್ (ರೀಚ್) ಸೇರಿಸಿ ಒಂದು ಹೇಳಿಕೆಯನ್ನು ಕೊಡುತ್ತಾನಂತೆ.

ದಕ್ಷಿಣ ಆಫ್ರಿಕಾದಲ್ಲಿ ಹಿಂದೂಸ್ಥಾನದವರು ವಸತಿಗಳನ್ನು ಕಟ್ಟಬಾರದೆಂಬ ನಿಯಮದ ಮೇರೆಗೆ ಮಿ|| ಜಿನ್ನಾರವರು ಅಸಮಾಧಾನವನ್ನು ಸೂಚಿಸಿರುವರು.

ಈಜಿಪ್ಟಿನಿಂದ ಹತ್ತಿಯನ್ನು ತರಿಸಲು ಇಂಡಿಯಾ ಸರ್ಕಾರದವರು ಏರ್ಪಾಡು ಮಾಡಿರುವರು.

ಯುದ್ಧಾನಂತರ ಇಂಡಿಯಾ ಪುನರಚನೆ ಮಾಡಲು ಸರ್ ಸ್ಯಾಮ್ರೇವಕ್ಸರ ಒಳಗೊಂಡ ಒಂದು ಕಮಿಟಿಯನ್ನು ಇಂಡಿಯಾ ಗವರ್ನಮೆಂಟಿನವರು ಏರ್ಪಡಿಸಿರುವರು

ಲಂಡನ್ ಏ 13—ಲೆನಿಗ್ರಾಡಿನ ಮೇಲೆ ಭಾರಿ ಕೈ ನಡೆಸಲು ನಾಜಿಗಳು ತೀರ್ಮಾನಿಸಿರುವರು. ಭಾರಿ ವಿಮಾನ ಯುದ್ಧ ನಡೆಯುತ್ತಿದೆ.

ಎಲ್ಲೆಲ್ಲಿ ಏನೇನು ?

ವಿ|| ಜಿನ್ನಾರವರು ಮುಂಬಯಿ ಬಿಟ್ಟು ಲಾಹೋರಿನಲ್ಲಿ ವಾಸಮಾಡುತ್ತಾರೆಂಬ ವದಂತಿ ಸುಳ್ಳು. ತಾವು ಲಾಹೋರಿನಲ್ಲಿ ಮನೆಯಿಟ್ಟದ್ದು ನಿಜ ಎಂದು ಹೇಳುತ್ತಾರೆ. ಲೀಗ್ ಮಿಟಿಂಗ್ ಆದ ಕೂಡಲೇ ಕಾಶ್ಮೀರಕ್ಕೆ ಹೋಗುವರು.

ಬಾಲ್ಕನ್ ರಾಜ್ಯಗಳನ್ನು ಕಾಯಲು ಹಂಗೇರಿಯು ಹಾಜರಿದೆ. ರಷ್ಯಾದಲ್ಲಿದ್ದ ತಮ್ಮ ಸೈನ್ಯವನ್ನೆಲ್ಲಾ ವಾಪಸ್ ತರಿಸಿದೆ.

ಕಲ್ಕತ್ತಾದಿಂದ ವಾಷಿಂಗ್ಟನ್ನಿಗೆ ವಿಮಾನ ನಡೆಸುವ ಒಂದು ಸಂಸ್ಥೆಯು ಸಿದ್ಧವಾಗಿದೆ. ಇಂಡಿಯಾ ಚೈನಾ ಅಲಾಸ್ಕಾ ಮಾರ್ಗವಾಗಿ ಹೋಗುವುದು. ಸರ್ಕಾರಿ ಅಪ್ಪಣೆ ಬಂದ ಕೂಡಲೇ ಕೆಲಸಕ್ಕೆ ಆರಂಭಿಸಿರುವುದು.

ವಿತ್ರವ ರಿಡಲಿಯವರು ಬಾಲ್ಕನ್ನಿನಲ್ಲಿ ಬಂದಿಳಿಯಬಹುದೆಂಬ ಶಂಕೆಯು ನಾಜಿಗಳಿಗೆ ಪೀಡಿಸುತ್ತಿದೆ. ಬೆಬರ್ಗಾವನ್ನು ಎಷ್ಟೇ ಕಷ್ಟವಾದರೂ ಕಾಪಾಡಲು ಅವರು ನಿರ್ಧರಿಸಿರುವರು ಇಟಲಿ ಸಿಸಲಿ ಸಾರ್ಡಿನಿಯಾಕ್ಕೆ ಜರ್ಮನ್ ಸೈನ್ಯ ಕಳುಹಿಸುವ ವಿಷಯವು ಹಿಟ್ಲರ್ ಮುಸಲೋನಿಯರ ಜೂರಿಚ್‌ನಲ್ಲಿ ಮಾತುಕತೆ ನಡೆಸಿದಾಗ ಒಪ್ಪಂದವಾಗಿದೆ.

ಜೋಹಾನ್ಸ್‌ಬರ್ಗ್ ಏ 13— ನ್ಯಾಯ ವಿರುದ್ಧವಾಗಿ ಮದ್ಯ ಗುಂಡಿಗಳನ್ನು ಶೇಖರಿಸಿದ್ದಕ್ಕಾಗಿ ಜಾಕೋ ಜೀವಾರ್ಹರ್ಡ್ ಎಂಬುವನಿಗೆ ಮಿಲಿಟರಿ ಕೋರ್ಟಿನವರು 15 ವರ್ಷ ಸಜೆ ವಿಧಿಸಿದರು.

ಬೊಂಬಾಯಿ ಏ 14— ಯಾವ ಮಾರ್ಕೆಟ್ಟಿನಲ್ಲಿ ಏನೊಂದು ವ್ಯಾಪಾರವೂ ಈ ದಿವಸ ನಡೆಯಲಿಲ್ಲ.

ಅಪೇರಾ ಸಿನೆ ಅಮೋಘ ಮಾರ
ಮನೋಹರಣ

ಪಿ.ಯು. ಚಿನ್ನಪ್ಪ, ಟಿ.ಆರ್. ರಾಜಕುಮಾರಿ, ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್. ಕೃಷ್ಣಮೂರ್ತಿ ಎ. ವಧೂರಾ, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವರು.

Edited, Printed & pnblisned by M. S. Krishna Rao, at the Satyavadi Press. Chamaraja Agrahar, Mysore.

ರಷ್ಯಾಕ್ಕೆ ಸಹಾಯ

ರಷ್ಯಾಕ್ಕೆ ಯುದ್ಧದ ಪದಾರ್ಥಗಳಿಲ್ಲದೆ ಜನರ ಉಪಯೋಗಕ್ಕೆ ಸಮಾರು 5 ಕೋಟಿ ಪೌಂಡಿನಷ್ಟು ಔಷಧ ಪದಾರ್ಥಗಳನ್ನು ಕಳುಹಿಸಲಾಗಿದೆ 82000 ಟನ್ ರಬ್ಬರ್, 2000 ಟನ್ ಕಳುಹಿಸಲಾಗಿದೆ. ಕಾರ್ಖಾನೆಗಳಲ್ಲಿ ಉಪಯೋಗಕ್ಕಾಗಿ ವಜ್ರಗಳು ಕಳುಹಿಸಲಾಗಿದೆ. ಇಂಡಿಯಾದಿಂದ ಶೆಣಬು, ಕಡಲೆಕಾಯಿ, ಚರ್ಮ, ಷೆಲ್ಲಾಕ್, ಬಟ್ಟೆ ಮೊದಲಾದುವುಗಳೂ, ಮತ್ತು ಒಂದು ಕೋಟಿಗೆ ಮೂರು ಗೋಣೀಚೀಲಗಳೂ ಕಳುಹಿಸಲಾಗಿದೆ. ಇಂಡಿಯಾದಿಂದ ಕರಾಚಿಗೆ ಕಳುಹಿಸಿ ಅಲ್ಲಿಂದ ಭೂ ಮಾರ್ಗವಾಗಿ ರಷ್ಯಾಕ್ಕೆ ತಲಪಿಸಲಾಗುತ್ತಿದೆ.

ಗೊಬ್ಬರ ತಯಾರಿಕೆ

ಇಂಡಿಯಾ ಸರಕಾರದವರು 12 ಕಾರ್ಖಾನೆಗಳಲ್ಲಿ ತಿಪ್ಪೆ ಗೊಬ್ಬರದಿಂದ ರಸಾಯನಿಕವಾದ ಗೊಬ್ಬರವನ್ನು ಮಾಡಲು ರೂ. 136000 ಮಂಜೂರ್ಮಾಡಿರುತ್ತಾರೆ. ಈ ತಯಾರಿಕೆಯನ್ನು ಕಲಿಯಲು 12 ಮಂದಿ ಒಬ್ಬೋ ಕೆಮಿಸ್ಟ್ರಿಯವರನ್ನೂ, 60 ಮಂದಿ ಇತರರನ್ನೂ ನಿರ್ವಾಡುಮಾಡುವರು. ಈ ಕೈಗಾರಿಕೆಯ ಕಾರ್ಖಾನೆಯನ್ನು ಬೆಂಗಳೂರಿನಲ್ಲಾಗಲೀ ಪೂನಾದಲ್ಲಾಗಲೀ ಪ್ರಾರಂಭಿಸುವರು. ಒಂದೂವರೆ ವರ್ಷದಲ್ಲಿ 10 ಲಕ್ಷ ಟನ್ ಗೊಬ್ಬರವನ್ನು ತಯಾರ್ಮಾಡಬೇಕೆಂದಿರುವರು.

ಮೈಸೂರು

ಮಾ|| ಕೆ. ವಿ ಅನಂತರಾಮಕ್ಕರವರು ನಿನ್ನೆ ಮೈಸೂರಿಗೆ ಬಂದು ಈ ದಿವಸ ನೀಲಗಿರಿಗೆ ಪ್ರಯಾಣಮಾಡಿದರು.

ಮಾ|| ಎಂ. ಶೇಷಾದ್ರಿಯವರು ನಿನ್ನೆ ಮೈಸೂರಿಗೆ ಬಂದರು. ಇವರು ಒಂದು ವಾರ ಮೈಸೂರು ಜಿಲ್ಲೆಗಳಲ್ಲಿರುವ ಪೋಲೀಸ್ ಆಫೀಸರ್‌ಗಳನ್ನು ಇನ್‌ಸ್ಪೆಕ್ಟ್ ಮಾಡುವರು.

ಮಾ|| ಎ ವೆಂಕಟೇಶಯ್ಯಂಗಾರ್ ಎಕ್ಸೈಜ್ ಕಮಿಷನರ್. 6 ತಿಂಗಳು ರಜ ಪಡೆಯುವರೆಂದು ತಿಳಿಯಬರುತ್ತದೆ.

ಮಾ|| ಎ. ಎಸ್ ರಾಘವಾಚಾರ್ ಕಂಟ್ರೋಲರು ಬುಧವಾರದಿಂದ ರಜದ ಮೇಲಿದ್ದವರು ಈಗ 6 ತಿಂಗಳು ರಜ ಪಡೆದಿರುವರು.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಆರ್, ಶಾಂತಿರಾಜಮ್ಮ. ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು — ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.

ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚು ವಿಷಯಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.

ಪಿ. ಮಂಜಪ್ಪ ಮರ್ಚೆಂಟ್
ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬ್ರಾಂಡಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Meet the India's Greatest Character-Actor
CHANDRAMOHAN
in
R O T I
(Hindi)
At — Ranjit
From 16—4—43
Daily 3 Shows
ಚಂದ್ರಮೋಹನ್ ಪಾತ್ರಮಹಿಸಿರುವ
ರೊಟಿ
(ಹಿಂದಿ)
ರಣಜಿತ್‌ನಲ್ಲಿ
16—4—43 ರಿಂದ
ಪ್ರತಿ ದಿನ 3 ಆಟಗಳು

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

ಭಂಗಾರ ಬೆಳ್ಳಿ ಧಾರಣೆ

ಸವರ್ನ	ರೂ.	55-4-0
ಬಂಗಾರ ತೊಲ	ರೂ.	77-8-0
ಬೆಳ್ಳಿ ,,		1-3

Modern Theatres'
MANONMANI
ಮಾಡರನ್ ಥಿಯೇಟರ್ಸ್‌ರವರ "ಮನೋನ್ಮಣಿ"

ಯಶಸ್ವಿಯುದ

22 ನೇ ವಾರ

ಸರಸ್ವತಿ ಟಾಕೀಸ್ .... ಮದ್ರಾಸು
ಸೆಂಟ್ರಲ್ ಸಿನಿಮಾ, ... ಮಧುರ

ಮಾಯಾವರಂ	ಸುಂದರಂ ಟಾಕೀಸ್	13	ನೇ ವಾರ
ಪೊಳ್ಳಾಚಿ	ಜಿಲ್ಲಂ ,,	6	,,
ಪಾಲ್ಘಾಟ್	ನ್ಯೂ ಥಿಯೇಟರ್	5	,,
ಈರೋಡ್	ತಿರುವಿಯುಗ	4	,,
ತ್ರಿವೇಂದ್ರಂ	ನ್ಯೂ ಥಿಯೇಟರ್	4	,,
ಮೈಸೂರು	ನ್ಯೂ ಅಪೆಂಡಾ	3	,,

ಮತ್ತಿತರ ಕಡೆಗಳಲ್ಲಿ

ಆಂಧ್ರಾದಲ್ಲಿ ನಮ್ಮ ಏಜೆಂಟರು—
ಜಾಂಬರಿಯಾ ಟಾಕಿ ಡಿಸ್ಟ್ರಿಬ್ಯೂಟರ್ಸ್, ಬೆಜವಾಡ

— ಹೆಚ್ಚು ವಿವರಗಳಿಗೆ —
ದಿ ಮಾಡರನ್ ಥಿಯೇಟರ್ಸ್
ಸೇಲಂ — ಮಧುರ